ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ**

**ರಾಷ್ಟ್ರೀಯಾ ಸೇವಾ ಯೋಜನೆ**

ಸಂ:ಡಿಟಿಇ/ಎನ್‌ಎಸ್‌ಎಸ್/13/ಕಾ–ಕಾರ್ಯಗಾರ/2017–18

ಸಂಯೋಜನಾಧಿಕಾರಿ ಕಛೇರಿ
ಅರಮನೆ ರಸ್ತೆ ಬೆಂಗಳೂರು–01,
ದಿನಾಂಕ:14.10.2019

**ಸುತ್ತೋಲೆ**

**ವಿಷಯ:** ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳ ರಾಜ್ಯ ಮಟ್ಟದ ಒಂದು ದಿನದ ಕಾರ್ಯಗಾರದ ಬಗ್ಗೆ.

**ಉಲ್ಲೇಖ:** 1) ಎನ್‌ಎಸ್‌ಎಸ್ ಮ್ಯಾನುಯಲ್‌ನ ನಿಯಮ 2.20 ಮತ್ತು ನಿಯಮ 3.35

2) **2018–19** ಕಛೇರಿಯ ಸಲಹಾ ಸಮಿತಿ ನಡಾವಳಿ

3) ಇಲಾಖೆಯ ಪತ್ರ ಸಂಖ್ಯೆ:ಡಿಟಿಇ/ಎನ್.ಎಸ್.ಎಸ್/14/ಇ–ಪ್ರಶಸ್ತಿ/2012–13 ದಿನಾಂಕ: 03.11.2018

4) ಇಲಾಖೆಯ ಪತ್ರ ಸಂಖ್ಯೆ:ಡಿಟಿಇ/ಎನ್.ಎಸ್.ಎಸ್/ಚಟುವಟಿಕೆ/05/2017–18 ದಿನಾಂಕ: 23.07.2019

* * * * *

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ (1&2)ಗಳಿಗೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ರಾಜ್ಯದ ಎಲ್ಲ ಪಾಲಿಟೆಕ್ನಿಕ್‌ಗಳ ಎನ್‌ಎಸ್‌ಎಸ್ ಅನುದಾನಿತ ಘಟಕ ಮತ್ತು ಸ್ವ-ಆರ್ಥಿಕ ಘಟಕಗಳ ಕಾರ್ಯಕ್ರಮಾಧಿಕಾರಿಗಳಿಗೆ 2019–20ನೇ ಸಾಲಿನ ಒಂದು ದಿನದ ಕಾರ್ಯಾಗಾರವನ್ನು ದಿನಾಂಕ: 19.10.2019 ರಂದು ಬೆಂಗಳೂರಿನ **ಕುಮಾರ ಪಾರ್ಕ ಪೂರ್ವ ಶೇಷಾದ್ರಿಪುರದಲ್ಲಿರುವ ಗಾಂಧಿಭವನದಲ್ಲಿ** ಏರ್ಪಡಿಸಲಾಗಿದೆ. ಈ ಕಾರ್ಯಗಾರವು ರಾ.ಸೇ.ಯೋ ಕಾರ್ಯವಿಧಾನ, ರಾಸೇಯೋ ಇಲಾಖಾ ಪ್ರಶಸ್ತಿ ಪ್ರದಾನ, ಸುವರ್ಣಮಹೋತ್ಸವಾಚರಣೆ ಹಾಗೂ ಕ್ಯಾನ್ಸರ್ ಜಾಗೃತಿ ಅಂಶಗಳನ್ನೊಳಗೊಂಡಿರುತ್ತದೆ. ಎಲ್ಲಾ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಗಿದೆ.

| **ಕಾರ್ಯಗಾರದ ಸ್ಥಳ** | **ದಿನಾಂಕ** | **ಸಮಯ** |
|---|---|---|
| **ಗಾಂಧಿಭವನ ಕುಮಾರ ಪಾರ್ಕ ಪೂರ್ವ ಶೇಷಾದ್ರಿಪುರ ಬೆಂಗಳೂರು –560001** | **19.10.2019** | **ಬೆಳಗ್ಗೆ 8.00 ಘಂಟೆ ಯಿಂದ ಸಂಜೆ 5.00 ಘಂಟೆಯ ವರೆಗೆ.** |

**ವಿಶೇಷ ಸೂಚನೆ:**ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳು ಬೆಳಗ್ಗೆ 8.00ಕ್ಕೆ ಹಾಜರಿದ್ದು(ಬೆಳಗಿನ ಉಪಹಾರ ಮತ್ತು ಅಪರಾಹ್ನ ಭೋಜನದ ವ್ಯವಸ್ಥೆ ಇರುತ್ತದೆ) ನೊಂದಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಎನ್‌ಎಸ್‌ಎಸ್‌ನ ಪೂರಕ ಸಾಧನ ಸಾಮಗ್ರಿಗಳನ್ನು ಪಡೆಯುವುದು. ಕಾರ್ಯಗಾರಕ್ಕೆ ಬರುವಾಗ ಸ್ವಯಂ ಸೇವಕರ ನೊಂದಣಿ ಪಟ್ಟಿ (10.06.19ರ ಸುತ್ತೋಲೆಯಂತೆ) ಹಾಗೂ ಗ್ರಾಂಟ್ ಇನ್ ಏಡ್ ಬಿಲ್‌ಗಳನ್ನು ಇದುವರೆಗೂ ಮುದ್ರಿತ ಪ್ರತಿಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸದೆ ಇರುವ ಕಾರ್ಯಕ್ರಮಾಧಿಕಾರಿಗಳು, ತರುವುದು.

ಸದರಿ ಕಾರ್ಯಗಾರದಲ್ಲಿ ಉಲ್ಲೇಖ (3) ರಲ್ಲಿ ತಿಳಿಸಿರುವಂತೆ 2017–18 ನೇ ಸಾಲಿನ ಇಲಾಖೆ ಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದ ಕಾರ್ಯಕ್ರಮಾಧಿಕಾರಿಗಳು ತಮ್ಮ ಪ್ರಾಚಾರ್ಯರೊಂದಿಗೆ ಹಾಗೂ ಸ್ವಯಂ ಸೇವಕರು ತಮ್ಮ ಕಾರ್ಯಕ್ರಮಾಧಿಕಾರಿಗಳೊಂದಿಗೆ ಹಾಜರಿರುವುದು. ಮುಂದುವರೆದು ಉಲ್ಲೇಖ (4)ರಲ್ಲಿ ತಿಳಿಸಿರುವಂತೆ 2018–19 ನೇ ಸಾಲಿನ ರಾ.ಸೇ.ಯೋ ಅಧಿಕಾರಿ/ಸ್ವಯಂ ಸೇವಕರಿಂದ ಮಾಡಲಾದ ಸಮಾಜಮುಖಿ ಯೋಜನೆ (Project) ಗಳಿಗೆ ಆಯಾ ಪಾಲಿಟೆಕ್ನಿಕ್ ಸಂಸ್ಥೆಗಳ ಕಾರ್ಯಕ್ರಮಾಧಿಕಾರಿಗಳಿಗೆ ಪ್ರಶಸ್ತಿ ನೀಡಲಾಗುವುದು.

ಈ ಕಾರ್ಯಗಾರವು ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಪ್ರಾದೇಶಿಕ ನಿರ್ದೇಶಕರು (ಭಾರತ ಸರ್ಕಾರ) ರಾಜ್ಯ ಎನ್.ಎಸ್.ಎಸ್ ಅಧಿಕಾರಿಗಳು ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ನಡೆಯಲಿರುವುದರಿಂದ, ಕಾರ್ಯಗಾರದಲ್ಲಿ ಭಾಗವಹಿಸುವ ಕಾರ್ಯಕ್ರಮಾಧಿಕಾರಿಗಳು ಶಿಸ್ತು ಬದ್ಧತೆಯಿಂದ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಪ್ರಾಚಾರ್ಯರುಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ರಾ.ಸೇ.ಯೋ 50ನೇ ವರ್ಷದ ಆಚರಣೆಯಾಗಿರುವುದರಿಂದ ಕಾರ್ಯಕ್ರಮಾಧಿಕಾರಿಗಳೆಲ್ಲರೂ ಸಕ್ರೀಯವಾಗಿ ಪಾಲ್ಗೊಂಡು ಈ ಕಾರ್ಯಾಗಾರವನ್ನು ಯಶಸಿಗೊಳಿಸಲು ಸೂಚಿಸಿದೆ.

ನಿರ್ದೇಶಕರು

**ಇವರಿಗೆ,** ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ –ಸೂಕ್ತ ಕ್ರಮಕ್ಕಾಗಿ

ಪ್ರತಿ:

1. ರಾಜ್ಯ ಸಂಪರ್ಕಾಧಿಕಾರಿಗಳು ರಾಜ್ಯ ಎನ್‌ಎಸ್‌ಎಸ್ ಕೋಶ ಯುವಜನ ಸೇವಾ ಇಲಾಖೆ ಬೆಂಗಳೂರು.
2. ಪ್ರಾದೇಶಿಕ ನಿರ್ದೇಶಕರು, ಎನ್‌ಎಸ್‌ಎಸ್ ಪ್ರಾದೇಶಿಕ ಕೇಂದ್ರ, ಬಸವನಗುಡಿ ಬೆಂಗಳೂರು–04
3. ಇ–ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ